ಸಮುದಾಯಗಳ ನಿರ್ಲಕ್ಷ್ಯದಿಂದ ಕಾಂಗ್ರೆಸ್‌ಗೆ ಪೆಟ್ಟು; ಸೋಮಣ್ಣ ಗೆಲುವು

ಉದಯಕಾಲ ನ್ಯೂಸ್

ಮಧುಗಿರಿ : ಕೆ ಎನ್ ರಾಜಣ್ಣನವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ 35,000 ಹೆಚ್ಚು ಮತಗಳ ಅಂತರದಿಂದ ಆಯ್ಕೆಯಾಗಿದ್ದರು. ಆದರೆ ಒಂದು ವರ್ಷದಲ್ಲಿ ಬಿಜೆಪಿ ಅಭ್ಯರ್ಥಿಯು 35 ಸಾವಿರ ಮತಗಳ ಜೊತೆಗೆ ಹೆಚ್ಚುವರಿಯಾಗಿ 12802 ಮತಗಳನ್ನು ಮುನ್ನಡೆ ಗಳಿಸಿರುವುದು ಕಾಂಗ್ರೆಸ್‌ಗೆ ಎಚ್ಚರಿಕೆ ಗಂಟೆಯಾಗಿದೆ.

ತಾಲೂಕಿನಲ್ಲಿ ಜೆಡಿಎಸ್ ಬಿಜೆಪಿ ಹೊಂದಾಣಿಕೆಯಾಗಿದ್ದರಿಂದ ಈ ಮತಗಳು ಒಗ್ಗಟ್ಟಾಗಿ ಚದುರಿ ಹೋಗದೆ ಬಿಜೆಪಿಯ ಪರವಾಗಿದ್ದು, ಕಾಂಗ್ರೆಸ್ ಮತಗಳು ಚದುರಿಹೋಗಿದ್ದು, ಬಿಜೆಪಿ ಮುನ್ನಡೆಯಾಗಲು ಕಾರಣ.

ಕ್ಷೇತ್ರದಲ್ಲಿ ಬಹುಸಂಖ್ಯಾತ ಮತಗಳಿರುವ ವಕ್ಕಲಿಗ, ಮಾದಿಗ , ಗೊಲ್ಲ ಜನಾಂಗದವರನ್ನು ಹಾಗೂ ಮುಖಂಡರುಗಳನ್ನು ನಿರ್ಲಕ್ಷ್ಯ ವಹಿಸಿದ್ದು, ಕೆ.ಎನ್. ರಾಜಣ್ಣನವರು ಈ ಹಿಂದೆ

ಶಾಸಕರಾಗಿದ್ದಾಗ ಕ್ಷೇತ್ರಕ್ಕೆ ಭೇಟಿ ಪ್ರತಿ ಬುಧವಾರ ಕಡ್ಡಾಯವಾಗಿ ಬೇಟಿ ನೀಡುತ್ತಿದ್ದರು. ಆದರೆ ಈಗ ಸಚಿವರಾದ ನಂತರ ಜವಾಬ್ದಾರಿ ಹೆಚ್ಚಿದ್ದು, ಈ ಬಾರಿ ಪ್ರತೀ ಬುಧವಾರ ಕ್ಷೇತ್ರಕ್ಕೆ ಬೇಟಿ ನೀಡುತ್ತಿದ್ದ ಸಂಪ್ರದಾಯಕ್ಕೆ ಬ್ರೇಕ್ ಬಿದ್ದಿದ್ದು,

ಮತದಾರರನ್ನು ಬಿಟ್ಟು ಕೇವಲ ಬೆಳಗ್ಗೆಯಿಂದ ಸಂಜೆಯ ವರೆವಿಗೂ ತಮ್ಮ ಸುತ್ತ ಕಾಣುವ ಒಂದೇ ಮುಖಗಳ ಲೀಡರ್ ಗಳಿಗೆ ಮಣೆ ಹಾಕುತ್ತಿರುವುದು.

ಇಲ್ಲಿ ಕುಂಚಿಟಿಗ ಸಮುದಾಯದವರು ಹೆಚ್ಚಾಗಿದ್ದು ಕಾಂಗ್ರೆಸ್ ಅಭ್ಯರ್ಥಿಗಂಗಟಕಾರರಾಗಿದ್ದರಿಂದ ಜೊತೆಗೆ ಯಾವುದೇ ಅನುದಾನ ಕೇಳಲು ಹೋದಾಗ ಒಕ್ಕಲಿಗ

ಸಂಘದ ಪದಾಧಿಕಾರಿಗಳನ್ನು ಅವಮಾನಿಸಿದ್ದು ಜೊತೆಗೆ ನಾವು ಮತ ಹಾಕಿದರು ನಂಬದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ನವರಿದ್ದಾರೆ ಎಂಬ ಭಾವನೆಗೆ ಸಿಲುಕಿ ಒಕ್ಕಲಿಗ ಸಮುದಾಯದವರು ಬಿಜೆಪಿಯನ್ನು ಬೆಂಬಲಿಸಿದ್ದು ಸ್ಪಷ್ಟವಾಗುತ್ತಿದೆ. ಜೊತೆಗೆ ಕಳೆದ ಬಾರಿ ದೇವೇಗೌಡ ರಿಗೆ ಕ್ಷೇತ್ರದಲ್ಲಿ ಮುನ್ನಡೆ ಸಿಗದಿದ್ದು ಈ ಬಾರಿಯಾದರೂ ಅವರಿಗೆ ನ್ಯಾಯ ನೀಡಬೇಕೆಂದು ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆಗೆ ಸೈ ಅಂದಿದ್ದಾರೆ. ಒಟ್ಟಾರೆ ಕ್ಷೇತ್ರದಲ್ಲಿ ದೇಶ ಮತ್ತು ದ್ವೇಷಕ್ಕೆ ಮತದಾನವಾಗಿರುವುದು ಕಂಡುಬಂದಿದೆ.

ಎಚ್ಚರಿಕೆ ವಹಿಸಬಹುದ್ದಿತ್ತು: ಇತ್ತೀಚೆಗಷ್ಟೇ ಮಧುಗಿರಿ ಪುರಸಭೆ 13ನೇ ವಾರ್ಡಿನ ಮರುಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ 200ಕ್ಕೂ ಹೆಚ್ಚು ಮತಗಳ ಪಡೆದಿದ್ದನ್ನು ಈ ಜನಾದೇಶದ ಬಗ್ಗೆ ಕಾಂಗ್ರೆಸಿಗರು ಎಚ್ಚರ ವಹಿಸಬೇಕಾಗಿತ್ತು.

ಕೆಲ ಕಾಂಗ್ರೆಸ್ ಲೀಡರ್ ಗಳು ರಾಜಣ್ಣ ಮತ್ತು ರಾಜೇಂದ್ರ ರವರು ಬಂದಾಗ ಮಾತ್ರ ಹಾಜರಾಗಿ ಅವರ ಬೆಳೆ ಬೇಯಿಸಿಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುತ್ತಿರುವುದು ಮತದಾರರನ್ನು ಕೆರಳಿಸಿದೆ.

ಇನ್ನು ಸಚಿವರಿಂದ ಅನೂಕೂಲ ಪಡೆದು ಕೊಂಡಿರುವ ಕೆಲ ಕಾಂಗ್ರೆಸ್ ನಾಯಕರು ವಿರೋಧಿ ಪಡೆಯೊಂದಿಗೆ ಒಳಗೊಳಗೆ ಗುರುತಿಸಿಕೊಂಡು ಬೇರೆ ಯಾರಾದರೂ ನಮ್ಮ ಗುಟ್ಟನ್ನು ರಟ್ಟು ಮಾಡುತ್ತಾರೆಂಬ ಭಯದಿಂದಾಗಿ ಪ್ರತಿ ಸಾರಿ ಸಚಿವರು ಬಂದಾಗ ಕಾಣಿಸಿಕೊಂಡು ಸಮಸ್ಯೆಗಳನ್ನು ಹೊತ್ತು ಬರುವ ಮತದಾರರಿಗೆ ಇಲ್ಲಸಲ್ಲದ ಸಬೂಬುಗಳನ್ನು ಹೇಳಿ ಕಳುಹಿಸುತ್ತಿರುವುದು ಕಾಂಗ್ರೆಸ್ ನ ಮತಗಳು ಚದುರಲು ಪ್ರಮುಖ ಕಾರಣ ಎನ್ನಲಾಗಿದೆ.

2019 ರ ಲೋಕಸಭಾ ಚುನಾವಣೆಯಲ್ಲಿ ದೇವೇಗೌಡರನ್ನು ಸೋಲಿಸಲು ರಾಜಣ್ಣನವರು ಬಿಜೆಪಿ ಬೆಂಬಲಿಸಿದ್ದರು ಎಂಬುದು ಗುಟ್ಟಾಗೇನೂ ಉಳಿದಿಲ್ಲ. ಇದು 2024 ರ ಚುನಾವಣೆಯಲ್ಲಿ, ಈ ಮತಗಳು ವಾಪಾಸ್ಸಾಗದೇ ಕಾಂಗ್ರೆಸ್ ಅಭ್ಯರ್ಥಿಗೆ ತಿರುಮಂತ್ರವಾಯಿತು ಎಂಬ ಮಾತುಗಳು ಕ್ಷೇತ್ರದಾದ್ಯಂತ ಕೇಳಿ ಬರುತ್ತಿದೆ.

ನಾಲ್ವಡಿ ಅವರ ಆಳ್ವಿಕೆಯ ಅವಧಿ ಸುವರ್ಣಯುಗ: ಅಪೂರ್ವಚಂದ್ರ ಶ್ಲಾಘನೆ

ಉದಯಕಾಲ ನ್ಯೂಸ್

ಮದ್ದೂರು: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ತಮ್ಮ ಅಭಿವೃದ್ಧಿಪರ ಆಲೋಚನೆಗಳು ಹಾಗೂ ಸಾಮಾಜಿಕ ಸುಧಾರಣೆಗಳ ಮೂಲಕ ಇಂದಿಗೂ ಜನ ಸಾಮಾನ್ಯರ ಮನದಲ್ಲಿ ಅಜರಾಮರಾಗಿದ್ದಾರೆ ಎಂದು ಎಂ.ಎಚ್. ಚನ್ನೇಗೌಡ ವಿದ್ಯಾನಿಲಯದ ಕಾರ್ಯದರ್ಶಿ ಸಿ.ಅಪೂರ್ವಚಂದ್ರ ಹೇಳಿದರು.

ಪಟ್ಟಣದ ಎಚ್.ಕೆ.ವೀರಣ್ಣಗೌಡ ಕಾಲೇಜಿನಲ್ಲಿ ಮಂಗಳವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಘಟಕ ಹಾಗೂ ಎಂ.ಎಚ್.ಚನ್ನೇಗೌಡ ವಿದ್ಯಾ ಸಂಸ್ಥೆ ಸಹಯೋಗದಲ್ಲಿ ಆಯೋಜಿಸಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿ, ಆಧುನಿಕ ಕನ್ನಡ ನಾಡಿನ ನಿರ್ಮಾತೃ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹಾಕಿದ ಭದ್ರಬುನಾದಿಯ ಮೇಲೆ ಅಭಿವೃದ್ಧಿ ಹೊಂದಿರುವ ಕರ್ನಾಟಕ ಇಂದು ವಿಶ್ವದಲ್ಲೇ ಮನ್ನಣೆ ಪಡೆದು ತಂತ್ರಜ್ಞಾನ, ಕೈಗಾರಿಕೆ, ಶೈಕ್ಷಣಿಕ, ವೈದ್ಯಕೀಯ, ಸಾಮಾಜಿಕ ಸುಧಾರಣೆ, ಜನಸಾಮಾನ್ಯರ ಅಭಿವೃದ್ಧಿ, ಹಾಗೂ ಆರ್ಥಿಕ ವಲಯ ಸೇರಿದಂತೆ ಹಲವಾರು ಕ್ಷೇತ್ರಗಳಲ್ಲಿ ಭವ್ಯವಾಗಿ ಬೆಳೆದು ನಿಂತಿದೆ ಎಂದು ಅವರು ಬಣ್ಣಿಸಿದರು.

ಒಡೆಯರ್ ಅವರು 39 ವರ್ಷಗಳ ಆಳ್ವಿಕೆಯ

ಅವಧಿಯು ಸುವರ್ಣ ಯುಗವಾಗಿದ್ದು, ಗಾಂಧೀಜಿಯವರು ಒಡೆಯರನ್ನ ರಾಜ ಋಷಿ ಎಂದು ಉಲ್ಲೇಖಿಸಿದ್ದು ಅವರ ಸರ್ವಜನ ಅಭಿವೃದ್ಧಿಯ ಆಳ್ವಿಕೆಗೆ ಕನ್ನಡಿಯಂತೆ ಎಂದ ಅವರು ಮಹಿಳೆಯರು ಸೇರಿದಂತೆ ಜನಸಾಮಾನ್ಯರ ಬದುಕನ್ನು ಕಟ್ಟಿಕೊಳ್ಳಲು ಹಲವಾರು ಯೋಜನೆಗಳನ್ನ ಜಾರಿಗೆ ತಂದಿರುವುದು ಇಂದಿನ ಜನಪ್ರತಿನಿಧಿಗಳಿಗೆ ಮಾದರಿಯಾಗಬೇಕೆಂದರು.

ಕನ್ನಡ ಸಾಹಿತ್ಯ ಪರಿಷತ್ ತಾಲೂಕು ಘಟಕ ಅಧ್ಯಕ್ಷ ಕೆ.ಸುನಿಲ್ ಕುಮಾರ್ ಮಾತನಾಡಿ, ಕನ್ನಡ ಭಾಷೆ, ನಾಡು-ನುಡಿಗೆ ಸಂಬಂಧಿಸಿದಂತೆ ಮಹೋನ್ನೋತ್ತ ಕೊಡುಗೆ ನೀಡುತ್ತಿರುವ ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದ ಕೀರ್ತಿ ನಾಲ್ವಡಿಯರದ್ದಾಗಿದ್ದು, ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಜೀವನದಲ್ಲಿ ಇಂತಹ ಮಹನೀಯರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡುವ ಮೂಲಕ ಅವರ ತತ್ವ ಆದರ್ಶಗಳನ್ನು ಮೈಗೂಡಿಸಿಕೊಂಡು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಿ ರೂಪು ಗೊಳ್ಳುವುದರ ಜೊತೆಗೆ ಸುಭದ್ರ ನಾಡಿನ ನಿರ್ಮಾಣಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರಾಣಿ ಐಶ್ವರ್ಯ ಡೆವೆಲಪರ್ಸ್ ಎಂ.ಡಿ.ಎಚ್.ಎಲ್.ಸತೀಶ್, ಪ್ರಾಧ್ಯಾಪಕರುಗಳಾದ ಆರ್.ಸಂದೀಪ್, ಜಿ.ಎಸ್.ಶಂಕರೇಗೌಡ, ಸುರೇಂದ್ರ, ಕಸಾಪ ಪದಾಧಿಕಾರಿಗಳಾದ ಡಾ.ಈರಯ್ಯ ಇದ್ದರು.

ಉಜ್ವಲ ಭವಿಷ್ಯಕ್ಕಾಗಿ ಪರಿಸರ ಸಂರಕ್ಷಣೆ ಅನಿವಾರ್ಯ: ಕೆ.ಉದಯ್

ಉದಯಕಾಲ ನ್ಯೂಸ್

ತಿಪಟೂರು: ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ತಿಪಟೂರು ತಾಲ್ಲೂಕಿನ ಕಸಬಾ ಹೋಬಳಿಯ ಆನಗೊಂಡನಹಳ್ಳಿ ಗ್ರಾಮದಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ ಹಾಗೂ ಕೆರೆಯ ಏರಿಯ ಸುತ್ತ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ತಾಲ್ಲೂಕು ಯೋಜನಾಧಿಕಾರಿ ಉದಯ್. ಕೆ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ ಇತ್ತೀಚಿನ ದಿನಗಳಲ್ಲಿ ಆಧುನಿಕ ಯುಗಕ್ಕೆ ಹೊಂದಿಕೊಂಡ ಜನರು ಫ್ಯಾಕ್ಟರಿ ಹಾಗೂ ದೊಡ್ಡ ದೊಡ್ಡ ಬಂಗಲೆ ಹಾಗೂ ಜಮೀನುಗಳ ಖಾಲಿ ಜಾಗದ ಆಸೆಯಿಂದಾಗಿ ಗಿಡ ಮರಗಳ ನಾಶಗೊಳಿಸಿ, ಪ್ರಕೃತಿಯ ವಿಕೃತರೂಪಕ್ಕೆ ಕಾರಣವಾಗುತ್ತಿರುವುದು ಮಾನವ ಸಂಕುಲದ ದುರ್ದೈವವೇ ಸರಿ ಇನ್ನುಮುಂದೆಯಾದರೂ ನಾವು ಈ ತರಹದ ದುರಾಸೆಯನ್ನು ತ್ಯಜಿಸಿ ಕನಿಷ್ಟ ' ಮನೆಗೊಂದು ಮರ ಊರಿಗೊಂದು ವನ ' ಎಂಬ ಧ್ಯೇಯದೊಂದಿಗೆ ನಮ್ಮ ಸುತ್ತ ಮುತ್ತಲ ಪ್ರದೇಶ ಹಾಗೂ ಪರಿಸರಗಳಲ್ಲಿ ಒಬ್ಬರು ಕನಿಷ್ಟ ಒಂದು ಸಸಿಯನ್ನು ನೆಟ್ಟು ಅದನ್ನು ಕಾಪಾಡಿಕೊಂಡು ಬಂದರೆ, ಮುಂದೆ ನಮಗೂ ಹಾಗೂ ಮುಂದಿನ ಪೀಳಿಗೆಗೆ ಪರಿಸರದಿಂದ ಅತ್ಯುತ್ತಮ ಕೊಡುಗೆ ಸಿಗುವುದು ಶತಸಿದ್ಧ ಎಂದು ತಿಳಿಸಿ, ಕೆರೆಯ ಏರಿಯ ಸುತ್ತ ಅರಣ್ಯ ಇಲಾಖೆಯ ವತಿಯಿಂದ ಉಚಿತವಾಗಿ ಪಡೆದ ಮಹಾಗನಿ, ನೇರಳೆ ಹಾಗೂ ಕಂಚಿವಾಳ ಸಸಿಗಳ ನಾಟಿ ಮಾಡಲು ಚಾಲನೆ ನೀಡಿ ಇಂದಿನಿಂದಲೇ ಪ್ರತಿಯೊಬ್ಬರೂ ಒಂದೊಂದು ಗಿಡದ ಜವಾಬ್ದಾರಿ ಹೊತ್ತುಕೊಂಡು, ಕನಿಷ್ಟ 3 ವರ್ಷ ಪೋಷಿಸಿದರೆ ಮುಂದೆ ನಮ್ಮನ್ನು ಪ್ರಕೃತಿಯೇ ಕಾಪಾಡುತ್ತದೆ ಎಂದು ತಿಳಿಸಿದರು. ತಾಲ್ಲೂಕು ಕೃಷಿ ಮೇಲ್ವಿಚಾರಕ ಪ್ರಮೋದ್ ಕುಮಾರ್, ವಲಯ ಮೇಲ್ವಿಚಾರಕ ದಿನೇಶ್, ಸೇವಾಪ್ರತಿನಿಧಿ ರೂಪ, ಕೆರೆ ಸಮಿತಿ ಅಧ್ಯಕ್ಷರಾದ ಪ್ರಭು, ಮೂರ್ತಿ ಮತ್ತು ರಮೇಶ್ ಸೇರಿದಂತೆ ಸಂಘದ ಪಾಲುದಾರ ಬಂದುಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ತುಮಕೂರು ನಗರದ ದಿಬ್ಬೂರಿನ ದೇವರಾಜು ಅರಸು ಬಡಾವಣೆಯಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಮಹಾನಗರ ಪಾಲಿಕೆ ಹಾಗೂ ಹಸಿರುದಳ ಸಂಸ್ಥೆ ವತಿಯಿಂದ ಏರ್ಪಡಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಈ ಭಾಗದ ನಿವಾಸಿಗಳು ಬಿಡಿಸಿರುವ ಚಿತ್ತಾಕರ್ಷಕ ರಂಗೋಲಿಗಳ ದೃಶ್ಯ. ಈ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು.

ಇಂಡಿಯನ್ ಬೆಂಕ್ Indian Bank
ಇಲಾಹಾಬಾದ್ ALLAHABAD
BANKING THAT'S # TWICE AS GOOD

ಚಾಮರಾಜಪೇಟೆ ಶಾಖೆ (ಇಎಎಲ್‌ಬಿ)
ನಂ.270, ಆಲ್ಬರ್ಟ್ ವಿಕ್ಟರ್ ರಸ್ತೆ, 1ನೇ ಮುಖ್ಯ ರಸ್ತೆ
ಚಾಮರಾಜಪೇಟೆ, ಬೆಂಗಳೂರು-560018

ಸ್ವಾಧೀನತೆಯ ಪ್ರಕಟಣೆ (ಸ್ಥಿರಾಸ್ತಿಗಳಿಗೆ) ನಿಯಮ 8(1)]

ಕೆಳಸಹಿದಾರರು ಇಂಡಿಯನ್ ಬ್ಯಾಂಕ್‌ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಸ್ವತ್ತುಗಳ ಪ್ರತಿಭೂತಿ ಹಿತಾಸಕ್ತಿ ಮತ್ತು ಪುನರ್ ನಿರ್ಮಾಣ ಭದ್ರತೆ ಮತ್ತು ಭದ್ರತಾ ಹಿತಾಸಕ್ತಿ ನಿಯಮ 13(12) ರ ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಅನುಷ್ಠಾನ) ನಿಯಮಗಳು 2002ರ ಅನ್ವಯ ಈ ಕೆಳಗಿನ ಸಾಲಗಾರರಿಗೆ ದಿನಾಂಕ 01.03.2024 ರಂದು ತಗಾದೆ ಸೂಚನೆಯನ್ನು ನೀಡಿದ್ದು, ಸಾಲಗಾರರಾದ ಶ್ರೀಮತಿ ಆರ್ ಮನ�ೀಷಾ ಕೋಂ ಲೇಟ್ ದಿಲೀಪ್ ಸಿಂಗ್ ಎಂ , ವಿಳಾಸ : ಫ್ಲಾಟ್ ನಂ. ಎಸ್‌ಎಫ್-1 ಎರಡನೇ ಮಹಡಿ, ಶ್ರೀ ಸಾಯಿ ಎನ್‌ಕ್ಲೇವ್, 3ನೇ ಮುಖ್ಯ ರಸ್ತೆ, ಕಾವೇರಿ ನಗರ, ಕತ್ತರಿಗುಪ್ಪೆ ಗ್ರಾಮ, ಬೆಂಗಳೂರು-560085, ವಿಳಾಸ : ಕೇರಾಫ್ ಆರ್ ಎಲ್‌ಎನ್ ಸಿಂಗ್ ಫ್ಲಾಟ್ ನಂ. 318ಎ, ಫ್ಲ್ಯಾಟ್ ನಂ. 318ಎ, ಫ್ಲ್ಯಾಟ್ ನಂ. 304 ಬ್ಲಾಕ್ ಸಿ, ಪ್ರಗತಿ ಪೆರಡೈಸ್ ಪ್ರಗತಿ ನಗರ, ಬಾಚುಪಲ್ಲಿ, ಮೆಡ್‌ಚಲ್ ಹೈದರಾಬಾದ್, ತೆಲಂಗಾಣ-500090. 2. ಶ್ರೀ ದಿಲೀಪ್ ಸಿಂಗ್ ಬಿನ್ ಮಹದೇವ ಸಿಂಗ್ ಬಿ ವಿಳಾಸ : ಫ್ಲ್ಯಾಟ್ ನಂ. ಎಸ್‌ಎಫ್-1 ಎರಡನೇ ಮಹಡಿ, ಶ್ರೀ ಸಾಯಿ ಎನ್‌ಕ್ಲೇವ್, 3ನೇ ಮುಖ್ಯ ರಸ್ತೆ, ಕಾವೇರಿ ನಗರ, ಕತ್ತರಿಗುಪ್ಪೆ ಗ್ರಾಮ, ಬೆಂಗಳೂರು-560085, ವಿಳಾಸ : ಕೇರಾಫ್ ಆರ್ ಎಲ್‌ಎನ್ ಸಿಂಗ್ ಫ್ಲಾಟ್ ನಂ. 318ಎ, ಫ್ಲ್ಯಾಟ್ ನಂ. 318ಎ, ಫ್ಲ್ಯಾಟ್ ನಂ. 304 ಬ್ಲಾಕ್ ಸಿ, ಪ್ರಗತಿ ಪೆರಡೈಸ್ ಪ್ರಗತಿ ನಗರ, ಬಾಚುಪಲ್ಲಿ, ಮೆಡ್‌ಚಲ್ ಹೈದರಾಬಾದ್, ತೆಲಂಗಾಣ-500090. 3. ಶ್ರೀಮತಿ ಎಸ್ ಪ್ರಭಾವತಿ, ಕೋಮ ಮಹದೇವ ಸಿಂಗ್ ಬಿ, ವಿಳಾಸ : ಫ್ಲ್ಯಾಟ್ ನಂ. ಎಸ್‌ಎಫ್-1 ಎರಡನೇ ಮಹಡಿ, ಶ್ರೀ ಸಾಯಿ ಎನ್‌ಕ್ಲೇವ್, 3ನೇ ಮುಖ್ಯ ರಸ್ತೆ, ಕಾವೇರಿ ನಗರ, ಕತ್ತರಿಗುಪ್ಪೆ ಗ್ರಾಮ, ಬೆಂಗಳೂರು-560085, ವಿಳಾಸ : ಬೈರಂಬಾಡಿ ಗ್ರಾಂ, ಹಿರಿಯೂರು ಅರಸೀಕರೆ ತಾಸನ-573103, ಇವರು ಇಂಡಿಯನ್ ಬ್ಯಾಮಕ್ ಚಾಮರಾಜಪೇಟೆ ಶಾಖೆಯಿಂದ (ಇಎಎಲ್‌ಬಿ) ಪಡೆದ ಸಾಲದ ಮೊತ್ತ ನೋಟೀಸಿನಲ್ಲಿ ತಿಳಿಸಿರುವಂತೆ ರೂ.36,80,412/- (ಮೂವತ್ತಾರು ಲಕ್ಷದ ಎಂಭತ್ತು ಸಾವಿರದ ನಾನ್ಕೂರ ಹನ್ನೆರಡು ರೂಪಾಯಿಗಳು ಮಾತ್ರ) ಮತ್ತು ಬಡ್ಡಿ /ಎಂಎಐ ರೂ.99587 ಗೃಹಸಾಲ ಖಾತಾ ಸಂ. 50485610193 ರಲ್ಲಿ 01.03.2024 ರವರೆಗೆ ಮತ್ತು 01.03.2024ರಿಂದ ಬಡ್ಡಿಯನ್ನು ಈ ನೋಟೀಸ್ ನೀಡಿದ 60 ದಿನಗಳ ಒಳಗೆ ಮರುಪಾವತಿಸುವಂತೆ ಸೂಚಿಸಲಾಗಿತ್ತು. ಸಾಲಗಾರರು ಹಣವನ್ನು ಮರುಪಾವತಿ ಮಾಡಲು ವಿಫಲರಾಗಿದ್ದು, ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಕೆಳಸಹಿದಾರರು ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಸೆಕ್ಷನ್ 13 (4) ಕಾಯಿದೆ ನಿಯಮ 8 ಮತ್ತು 9ನ್ನು ಓದಿಕೊಂಡಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 01ನೇ ಜೂನ್ 2024 ರಂದು ಸ್ವಾಧೀನ ಪಡಿಸಿಕೊಂಡಿರುತ್ತಾರೆ.

ಸಾಲಗಾರರು ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಈ ಸ್ವತ್ತುಗಳ ಬಗ್ಗೆ ಯಾರೂ ವ್ಯವಹರಿಸಕೂಡದು, ಒಂದು ವೇಳೆ ವ್ಯವಹರಿಸಿದ್ದೇ ಆದಲ್ಲಿ ಇಂಡಿಯನ್ ಬ್ಯಾಂಕ್, ಚಾಮರಾಜಪೇಟೆ ಶಾಖೆಗೆ ಬರಬೇಕಾದ ಬಾಕಿ ಹಣ ರೂ.36,80,412/- (ಮೂವತ್ತಾರು ಲಕ್ಷದ ಎಂಭತ್ತು ಸಾವಿರದ ನಾನ್ಕೂರ ಹನ್ನೆರಡು ರೂಗಳು ಮಾತ್ರ) ಮತ್ತು ಬಡ್ಡಿ /ಎಂಎಐ ರೂ.99587 ಗೃಹಸಾಲ ಖಾತಾ ಸಂ. 50485610193 ರಲ್ಲಿ ಮತ್ತು 01.03.2024ರಿಂದ ಬಡ್ಡಿಯನ್ನು ಹಾಗೂ ಮುಂದುವರಿದ ಬಡ್ಡಿ, ವೆಚ್ಚಗಳು, ಇತರೆ ದರಗಳು ಮತ್ತು ಖರ್ಚುಗಳನ್ನು ಪಾವತಿಸಬೇಕಾಗುವುದು.

ಸ್ಥಿರ ಆಸ್ತಿಯ ವಿವರ

ಅಡಮಾನ ಮಾಡಿರುವ ಆಸ್ತಿಗಳು: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಸಯೋಗ್ಯ ಫ್ಲ್ಯಾಟ್ ನಂ. ಎಸ್‌ಎಫ್ -1 (3ಬಿಹೆಚ್‌ಕೆ) ಎರಡನೇ ಮಹಡಿ, ಶ್ರೀ ಸಾಯಿ ಎನ್‌ಕ್ಲೇವ್, ಅಗಿದ್ದು ಸುಪರ್ ಬಿಲ್ಟಪ್ ಪ್ರದೇಶ 1400 ಚ.ಅಡಿ ಮತ್ತು 280 ಚ.ಅಡಿಗಳ ಭಾಗ ಮಾಡಲಾಗದ ಪಾಲು ಹಕ್ಕು ಟೈಟಲ್ ಮತ್ತು ಹಿತಾಸಕ್ತಗಳು ಇದರಲ್ಲಿದ್ದು, ಒಂದು ಅವ್ಯತ್ತವಾದ ಪ್ರದೇಶ ಕಾರು ನಿಲುಗಡೆಗೆ ಇದೆ. ಆಸ್ತಿಯ ನಂ. 29, ಸರ್ವೆ ನಂ. 114/2 ರಲ್ಲಿ ರಚಿತವಾಗಿದ್ದು, ಹೊಸ ಖಐಡಿ ನಂ. 163-ಡಬ್ಲ್ಯುಯು0190-10, 3ನೇ ಮುಖ್ಯ ರಸ್ತೆ, ಕಾವೇರಿ ನಗರ, ಕತ್ತರಿಗುಪ್ಪೆ ಗ್ರಾಮ ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು ಬೆಂಗಳೂರು ಇಲ್ಲಿದ್ದು, ಚಕ್ಕುಬಂಧಿ: ಹೂರ್ವಕ್ಕೆ: ತೆರೆದ ಪ್ರದೇಶ, ಪಶ್ಚಿಮಕ್ಕೆ: ಫ್ಲ್ಯಾಟ್ ನಂ. ಎಸ್‌ಎಫ್-2, ಉತ್ತರಕ್ಕೆ: ತೆರೆದ ಪ್ರದೇಶ, ದಕ್ಷಿಣಕ್ಕೆ: ತೆರೆದ ಪ್ರದೇಶ.

ದಿನಾಂಕ: 01.06.2024
ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ
ಇಂಡಿಯನ್ ಬ್ಯಾಂಕ್

ನಮೂನೆ-ಎ
ಸಾರ್ವಜನಿಕ ಪ್ರಕಟಣೆ
(ನಿಯಂತ್ರಣ 6 ರ ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್‌ರಪ್ಟಿ ಬೋರ್ಡ್ ಆಫ್ ಇಂಡಿಯಾ ಅಡಿಯಲ್ಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ನಿಯಮಗಳು, 2016)

ಕರ್ಕಿನೋಸ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ ಇದರ ಸಾಲದಾತರ ಗಮನಕ್ಕೆ